ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\8584\2015\ಎನಿಕಾಸ-2 DRE-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 20.8.2016

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ತುಮಕೂರು ತಾಲ್ಲೂಕು ಹಿರೇತೊಟ್ಲುಕೆರೆ ಗ್ರಾಮದ ಸ. ನಂ: 126 ಕ್ಷೇತ್ರ 19ಎ., 36ಗುಂಟೆ ಪೈಕಿ 3ಎ., ಜಮೀನಿನಲ್ಲಿ ಅನಧಿಕೃತವಾಗಿ ವಾಸವಾಗಿರುವ ಅಕ್ರಮ ನಿವಾಸಿಗಳನ್ನು ತೆರವುಗೊಳಿಸಿ, ಇವರ ಹೆಸರಿನಲ್ಲಿರುವ ಖಾತೆಗಳನ್ನು ರದ್ದುಗೊಳಿಸಿ ಸದರಿ ಜಮೀನನ್ನು ಗ್ರಾಮ ಪಂಚಾಯ್ತಿ ಹಿರೇತೊಟ್ಲುಕೆರೆ ವ್ಯಾಪ್ತಿಗೆ ನೀಡುವ ಕುರಿತು.

*******

ಶ್ರೀ.ನರಸಿಂಹರಾಜು.ಹೆಚ್.ಜಿ. ಬಿನ್ ಗಂಗಯ್ಯ ಹಿರೇತೊಟ್ಲುಕೆರೆ ಬ್ರಹ್ಮಸಂದ್ರ ಅಂಚೆ ತುಮಕೂರು ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಆಡವೀಶಯ್ಯ ಕಾರ್ಯದರ್ಶಿಗಳು, ಚಿಕ್ಕತೊಟ್ಲುಕೆರೆ ಗ್ರಾಮ ಪಂಚಾಯ್ತಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ (2) ಶ್ರೀ.ಶಿವಣ್ಣ, ಕಾರ್ಯದರ್ಶಿಗಳು, ಚಿಕ್ಕತೊಟ್ಲುಕೆರೆ ಗ್ರಾಮ ಪಂಚಾಯ್ತಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ಎದುರುದಾರ 1 ಮತ್ತು 2 ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅಧಿಕಾರ ದುರುಪಯೋಗ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ತಾಲ್ಲೂಕು ಹಿರೇತೊಟ್ಲುಕೆರೆ ಗ್ರಾಮದಲ್ಲಿ ಸ. ನಂ: 126 ಕ್ಷೇತ್ರ 19ಎ., 36ಗು., ಇದರಲ್ಲಿ 3ಎ., ಜಮೀನನ್ನು ವಸತಿ ಯೋಜನೆ ಅಡಿಯಲ್ಲಿ ಸರ್ಕಾರಿ ಆದೇಶ ಸಂ: ಎಲ್.ಎನ್.ಡಿ.ಟಿ.ಎಂಕೆ ಎಸ್.ಆರ್/21/1996-97 ಪ್ರಕಾರ ಗ್ರಾಮ ಪಂಚಾಯ್ತಿ ವಶಕ್ಕೆ ನೀಡಲಾಗಿದೆ. ಆದರೆ ಎದುರುದಾರರು ಬಡಜನರಿಗೆ ಮೋಸ ಮಾಡಿ

ಗ್ರಾಮ ಸಭೆ ಕರೆಯದೆ, ಜನರಿಂದ ಅರ್ಜಿ ಪಡೆಯದೆ, ಬಡಜನರನ್ನು ಗುರುತಿಸದೆ ಸರ್ಕಾರಿ ನೌಕರಿ ಇರುವವರಿಗೆ, ಆರ್ಥಿಕ ಸ್ಥಿತಿವಂತರಿಗೆ ಲಕ್ಷಲಕ್ಷ ಹಣ ಪಡೆದು ನಿವೇಶನಗಳನ್ನು ನೀಡಿ ಅಕ್ರಮವೆಸಗಿರುತ್ತಾರೆ. ಆದ್ದರಿಂದ ಇದನ್ನು ಸೂಕ್ತ ತನಿಖಾ ಮಾಡಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಹಿರೇತೊಟ್ಲಕೆರೆ ಗ್ರಾಮದ ಸ. ನಂ: 126ರಲ್ಲಿ ಕರ ನಿರ್ಧಾರಣಾ ರಿಜಿಸ್ಟರ್ ನಲ್ಲಿ ಸ. ನಂಬರ್ ದಾಖಲೆ ಮಾಡದೆ ಅನುಭವದಾರರು ಗ್ರಾಮದಲ್ಲಿ ವಾಸವಿದ್ದು ಅವರಿಗೆ ಗ್ರಾಮ ಪಂಚಾಯ್ತಿಯಿಂದ ಮೂಲಭೂತ ಸೌಲಭ್ಯ ಕಲ್ಪಿಸುವುದೊಸ್ಕರ ತೆರಿಗೆ ರಿಜಿಸ್ಟರನಲ್ಲಿ ಸೇರಿಸಿ ಕಂದಾಯ ವಸೂಲಿಗೆ ಮಾತ್ರ ಕ್ರಮ ಕೈಗೊಳ್ಳಲಾಗಿದೆ. ಆದರೆ ಯಾವುದೇ ಖಾಯಂ ದಾಖಲೆಯನ್ನು ಗ್ರಾಮ ಪಂಚಾಯ್ತಿ ನೀಡಿರುವುದಿಲ್ಲ. ಅಲ್ಲದೆ ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಇಲಾಖೆಯ ಸುತ್ತೋಲೆ ಸಂ: ಗ್ರಾ.ಅ.ಪ 126 ಗ್ರಾ.ಪ.ಅ 2003 ದಿ: 6.6.2003ರ ಪ್ರಕಾರ ಕ್ರಮ ಕೈಗೊಂಡಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ಅಕ್ರಮ ಎಸಗಿರುವುದಿಲ್ಲ ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4) ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರರ ನಂ:1 ರವರು ಸಲ್ಲಿಸಿದ ಆಕ್ಷೇಪಣೆಗಳನ್ನೇ ಅಳವಡಿಸಿಕೊಂಡಿದ್ದಾರೆ.

5) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸ. ನಂ: 126ರ ಗೋಮಾಳದಲ್ಲಿ ಕಟ್ಟಿರುವ ಮನೆಗಳ ಬಗ್ಗೆ ಸರ್ಕಾರದ ತಾಲ್ಲೂಕು ಕಛೇರಿಗಳಲ್ಲಿ ಇದರ ದಾಖಲೆಗಳು ಲಭ್ಯವಿರುವುದಿಲ್ಲ. ಆದರೆ ಎದುರುದಾರರ ಪ್ರಕಾರ ಕರ ಪಾವತಿಗಾಗಿ ಹಾಗೂ ಮೂಲಕ ಭೂತಸೌಕರ್ಯ ಒದಗಿಸುವ ಸಲುವಾಗಿ ಮಾತ್ರ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದು ಇದನ್ನೇ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ತೆಗೆದುಕೊಂಡು ಹೋದರೆ ಅವರು ಅದನ್ನು

ನೊಂದಾಯಿಸಿಕೊಳ್ಳುತ್ತಾರೆ ಆಗ ಈ ಅಕ್ರಮದಾರರೇ ಮಾಲೀಕರಾಗುತ್ತಾರೆ. ಆದ್ದರಿಂದ ಎದುರುದಾರರು ಸುಳ್ಳು ಮಾಹಿತಿ ನೀಡಿದ್ದು ಇದನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

6) ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಅನರ್ಹ ವ್ಯಕ್ತಿಗಳಿಗೆ ನಿವೇಶನ ನೀಡಿದ್ದಾರೆ ಅಂತ ಆಪಾದಿಸಿ ಅದರಲ್ಲಿ ಕೆಲವು ಜನ ನೌಕರಸ್ಥರಿಗೆ ಹಾಗೂ ಆರ್ಥಿಕ ಸ್ಥಿತಿವಂತರಿಗೆ ನಿವೇಶನ ನೀಡಲಾಗಿದೆ ಅಂತ ತಿಳಿಸಿ ಅವರ ಹೆಸರುಗಳನ್ನು ನಮೂದಿಸಿದ್ದಾರೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

<u>ಅನರ್ಹ ವ್ಯಕ್ತಿಗಳ ಪಟ್ಟಿ</u>

| ಅ. ನಂ | ಅನರ್ಹ ವ್ಯಕ್ತಿಗಳ ಪಟ್ಟಿ | ಉದ್ಯೋಗ | ಖಾತೆ ನಂ: |
|---|---|---|---|
| 1 | ಸಾಕಮ್ಮ ತಂದೆ ವೆಂಕಟೇಶಯ್ಯ | ಶಿಕ್ಷಕರು | 134 |
| 2 | ವೆಂಕಟಮ್ಮ ತಂದೆ ಹನುಮಂತರಾಯಪ್ಪ | ಶಿಕ್ಷಕರು | 242 |
| 3 | ಜಯಣ್ಣ ತಂದೆ ಕಂಬಯ್ಯ | ಆರ್ಥಿಕ ಸ್ಥಿತಿವಂತರು | 216 |
| 4 | ಹನುಮಂತರಾಯಮ್ಮ ತಂದೆ ಬೋರಶಟ್ಟಿ | ಆರ್ಥಿಕ ಸ್ಥಿತಿವಂತರು | 131 |
| 5 | ತಿಮ್ಮಬೋವಿ ತಂದೆ ನರಸಿಂಹಪ್ಪ | ಆರ್ಥಿಕ ಸ್ಥಿತಿವಂತರು | 152 |

ಹೀಗೆ ಒಟ್ಟು 25 ಜನ ಅನರ್ಹ ವ್ಯಕ್ತಿಗಳಿಗೆ ಲಂಚ ಪಡೆದು ನಿವೇಶನ ನೀಡಿದ್ದಾರೆಂದು ತಿಳಿಸಿದ್ದಾರೆ.

7) ಎದುರುದಾರರ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ಕಂದಾಯ ಇಲಾಖೆಯಿಂದ 3 ಎ., ಜಮೀನನ್ನು ವಸತಿ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯ್ತಿ ಚಿಕ್ಕತೊಟ್ಲುಕೆರೆಗೆ ನೀದ್ದಾರೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೆ ಅನುಭವದ ಆಧಾರದ ಮೇಲೆ ಮೂಲ ಭೂತ ಸೌಕರ್ಯ ಕಲ್ಪಿಸುವ ಸಲುವಾಗಿ ತಾತ್ಕಾಲಿಕ ಖಾತೆ ಮಾಡಿ ಕರ ಪಾವತಿಸಿಕೊಳ್ಳಲಾಗಿದೆ ಆದರೆ ಪಂಚಾಯ್ತಿಯಲ್ಲಿ ಇವರ ಹೆಸರಿನಲ್ಲಿ ಖಾತೆ ಮಾಡಲಾಗಿರುವುದಿಲ್ಲವೆಂದು ಹೇಳಿದ್ದಾರೆ.

8) ಎದುರುದಾರರು ಕೇವಲ ಆಕ್ಷೇಪಣೆಗಳನ್ನು ಮಾತ್ರ ಸಲ್ಲಿಸಿದ್ದು ಆದರೆ ಈ ಅಕ್ರಮ ಫಲಾನುಭವಿಗಳು ಅನುಭವದಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ದೂರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ 2014-15ನೇ ಸಾಲಿನ ಡಿಮ್ಯಾಂಡ್ ರಿಜಿಸ್ಟರನಲ್ಲಿ ಈ ಅಕ್ರಮ ಖಾತೆದಾರರ ಹೆಸರು ಕಂಡುಬರುತ್ತದೆ. ಹೀಗಾಗಿ ಎದುರುದಾರರು ಖಾತೆ ಮಾಡಿರುವ ಈ ಜನರು ಅಕ್ರಮ ಖಾತೆದಾರರು ಅಂತ ದೂರುದಾರರು ಆಪಾದಿಸಿರುವುದರಿಂದ ಅಲ್ಲದೆ ಸರ್ಕಾರಿ ನಿಯಮಗಳ ಪ್ರಕಾರ ಸರ್ಕಾರಿ ನೌಕರಸ್ಥರು ವಸತಿ ಯೋಜನೆಯಡಿಯಲ್ಲಿ ಈ ರೀತಿ ನಿವೇಶನಗಳನ್ನು ಪಡೆಯಲು ಬರುವುದಿಲ್ಲ ಆದ್ದರಿಂದ ಈ ಪ್ರಕರಣದಲ್ಲಿ ಎದುರುದಾರರು ಅಕ್ರಮವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9) ಈ ಮೇಲ್ಕಾಣಿಸಿದ ಮೂರು ಎಕರೆ ಜಮೀನು ಗ್ರಾಮ ಪಂಚಾಯ್ತಿ ವ್ಯಕ್ತಿಗೆ ಸೇರಿರುವುದರಿಂದ ಇದನ್ನು ಸರ್ಕಾರದ ವ್ಯಾಪ್ತಿಯಲ್ಲಿ ಉಳಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಈ ಜಮೀನಿನಲ್ಲಿ ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಮನೆ ಹಾಗೂ ಗುಡಿಸಲು ಹಾಕಿಕೊಂಡು ಅತಿಕ್ರಮಿಸಿಕೊಂಡಿದ್ದಾರೆಂದು ಲಭ್ಯವಿದ್ದ ದಾಖಲಾತಿಗಳ ಆಧಾರದ ಮೇಲೆ ಕಂಡುಬರುತ್ತದೆ. ಈ ಅಕ್ರಮ ನಿವಾಸಿಗಳನ್ನು ತೆರವುಗೊಳಿಸಿ, ಇವರ ಹೆಸರಿನಲ್ಲಿರುವ ಖಾತೆಗಳನ್ನು ರದ್ದು ಗೊಳಿಸಿ ಈ ಜಮೀನನ್ನು ಪುನಃ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಪಡೆದುಕೊಳ್ಳಲು ಸೂಕ್ತ ನಿರ್ದೇಶನ ನೀಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸಹ ಸಮಂಜಸವೆಂದು ಅಭಿಪ್ರಾಯಪಟ್ಟು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಡಿಯಲ್ಲಿ ಕ್ರಮಕೈಗೊಳುವುದು ಉಚಿತವೆನಿಸುತ್ತದೆ. ಆದ್ದರಿಂದ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

10) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಕೋರಿದೆ.

(ನ್ಯಾಯಮೂರ್ತಿ ಸುಭಾಷ್ ಬಿ ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ